# <u>ಕರ್ನಾಟಕ ವಿಧಾನ ಪರಿಷತ್ತು</u>

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 892**

**ಉತ್ತರಿಸಬೇಕಾದ ದಿನಾಂಕ : 19.08.2025**

**ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿ**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಸಹಕಾರಿ ವಲಯದಲ್ಲಿ ಹೊಸ ಯೋಜನೆಗಳನ್ನು ಜಾರಿಗೆ ತರಲಾಗಿದೆಯೇ ಅಥವಾ ಪ್ರಸ್ತಾಪಿಸಲಾಗಿದೆಯೇ; (ವಿವರ ನೀಡುವುದು) | 2025-26ನೇ ಸಾಲಿಗೆ ಘೋಷಣೆಯಾದ ಹೊಸ ಯೋಜನೆಗಳು ಹಾಗೂ ಪ್ರಸ್ತಾಪಿಸಲಾಗಿರುವ ಯೋಜನೆಗಳ ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ | ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಬೇರೆ ಯಾವುದೇ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ? (ವಿವರ ನೀಡುವುದು) | ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಬೇರೆ ಯಾವುದೇ ಯೋಜನೆಯನ್ನು ಪ್ರಸ್ತಾಪಿಸಿರುವುದಿಲ್ಲ. |

**ಕಡತ ಸಂಖ್ಯೆ: ಸಿಒ 152 ಸಿಸಿಬಿ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:814 (892) ಕ್ಕೆ ಅನುಬಂಧ-1

**2025-26 ನೇ ಸಾಲಿಗೆ ಈ ಕೆಳಕಂಡ ಹೊಸ ಯೋಜನೆಗಳು ಘೋಷಣೆಯಾಗಿರುತ್ತವೆ. ಸದರಿ ಯೋಜನೆಗಳ ಅನುಷ್ಠಾನದ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.**

| ವರ್ಷ | ಆಯವ್ಯಯ ಕಂಡಿಕೆ ಸಂಖ್ಯೆ | ಕಂಡಿಕೆ ವಿವರ |
|---|---|---|
| 2025-26 | 81 | ಸಹಕಾರ ಇಲಾಖೆಯಲ್ಲಿ ಕಾರ್ಯಕ್ಷಮತೆ, ಪಾರದರ್ಶಕತೆ ಹಾಗೂ ಜನಸ್ನೇಹಿ ಸೇವೆಗಳನ್ನು ನೀಡಲು ಈ ಕೆಳಕಂಡ ಸುಧಾರಣಾ ಕ್ರಮಗಳನ್ನು ಜಾರಿಗೆ ತರಲಾಗುವುದು:<br><br>i) ರಾಜ್ಯದ ಎಲ್ಲಾ ನೊಂದಾಯಿತ ಗೃಹ ನಿರ್ಮಾಣ ಸಹಕಾರ ಸಂಘಗಳ ಮಾಹಿತಿಯನ್ನು ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ವತಿಯಿಂದ ಆನ್‌ಲೈನ್‌ನಲ್ಲಿ ಅಳವಡಿಸಲಾಗುವುದು.<br><br>ii)ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಅವ್ಯವಹಾರವನ್ನು ತಡೆಯಲು ಸಹಾಯವಾಣಿಯನ್ನು ಪ್ರಾರಂಭಿಸಲಾಗುವುದು. |
| 2025-26 | 86 | ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೈನುಗಾರಿಕೆಯನ್ನು ಉತ್ತೇಜಿಸಲು 10 ಕೋಟಿ ರೂ. ಅನುದಾನವನ್ನು ಪ್ರಥಮ ಹಂತದಲ್ಲಿ ನೀಡಲಾಗುವುದು. ಕಲಬುರಗಿಯಲ್ಲಿ ನೂತನ ಮಗಾ ಡೈರಿಯನ್ನು ಪ್ರಾರಂಭಿಸಲು KKRDB ವತಿಯಿಂದ 50 ಕೋಟಿ ರೂ. ಅನುದಾನ ಒದಗಿಸಲಾಗುವುದು. |
| 2025-26 | 87 | KKRDB ವತಿಯಿಂದ ಕಲಬುರಗಿಯಲ್ಲಿ ಪ್ರಾದೇಶಿಕ ಸಹಕಾರ ಭವನವನ್ನು 10 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿದೆ. |

**2025-26 ನೇ ಸಾಲಿಗೆ ಪ್ರಸ್ತಾಪಿಸಲಾಗಿದ್ದ ಯೋಜನೆಗಳ ವಿವರ**

| ಕ್ರ.ಸಂ | ಕಾರ್ಯಕ್ರಮ/ಯೋಜನೆ |
|---|---|
| 1 | ರಾಜ್ಯದ ರೈತರಿಗೆ ಸಹಕಾರ ಸಂಘಗಳ ಮೂಲಕ ವಿತರಿಸುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಪೂರಕ ಸಾಲಗಳನ್ನು ಶೇ.3 ರ ಬಡ್ಡಿದರದಿಂದ ಶೂನ್ಯ ಬಡ್ಡಿದರಕ್ಕೆ ಇಳಿಸುವುದರಿಂದ ಪ್ರತಿ ವರ್ಷ 2.69 ಲಕ್ಷ ರೈತರಿಗೆ ಅನುಕೂಲವಾಗಲಿದೆ. |

| | |
|---|---|
| 2 | ರಾಜ್ಯದ ಟಿಎಪಿಸಿಎಂಎಸ್ ಗಳ ಗೋದಾಮು ದುರಸ್ತಿ ಮತ್ತು ಆಡಳಿತ ಕಛೇರಿ ಕಟ್ಟಡ ದುರಸ್ತಿ ನಿರ್ಮಾಣಕ್ಕೆ ಆರ್ಥಿಕ ನೆರವು (ಷೇರು /ಸಹಾಯಧನ) ಯೋಜನೆ (155 TAPCMS*10 ಲಕ್ಷ) |
| 3 | ಟಿಎಪಿಸಿಎಂಎಸ್ ಗಳಿಗೆ ಹೊಸ ಗೋದಾಮು/ಆಡಳಿತ ಕಛೇರಿ ನಿರ್ಮಾಣಕ್ಕೆ ಆರ್ಥಿಕ ನೆರವು (ಬಡ್ಡಿ ಸಹಾಯಧನ) (124 TAPCMS*7 ಲಕ್ಷ) |
| 4 | ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಮೂಲಭೂತ ಸೌಲಭ್ಯಗಳಿಗೆ ಅನುದಾನ ಒದಗಿಸಲಾಗುವುದು. (500 MPCS*5 ಲಕ್ಷ) |
| 5 | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಹಾಗೂ ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳವತಿಯಿಂದ ಮಿಲ್ಲೆಟ್ (ಸಿರಿಧಾನ್ಯ) ರಫ್ತು ಮಾಡಲು ಪ್ಯಾಕಿಂಗ್ ಸೌಲಭ್ಯವನ್ನು ಒದಗಿಸಲಾಗುವುದು. |
| 6 | ಗ್ರಾಹಕರಿಗೆ ಸುಲಭವಾಗಿ ಸಿಗುವಂತೆ ಜನತಾ ಬಜಾರ್ ಗಳ ಮುಖೇನ ಸಿರಿಧಾನ್ಯಗಳನ್ನು ಮಾರಾಟ ಮಾಡುವ ವ್ಯವಸ್ಥೆ ಕಲ್ಪಿಸಲಾಗುವುದು |
| 7 | ನಷ್ಟದಲ್ಲಿರುವ ಹಾಗೂ ನಬಾರ್ಡ್ ಪುನರ್ಧನ ಪಡೆಯಲು ಅರ್ಹತೆ ಹೊಂದದೇ ಇರುವ ಡಿಸಿಸಿ ಬ್ಯಾಂಕ್ ಗಳನ್ನು ಪುನಶ್ಚೇತನಗೊಳಿಸಲು ಷೇರು ಧನ ಒದಗಿಸಲಾಗುವುದು. |
| 8 | ಕೆ.ಒ.ಎಫ್, ಎಂ.ಎಸ್.ಐ.ಎಲ್ (stationary items) ಹಾಗೂ ಕೆ.ಎಂ ಎಫ್ ರವರ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಲು ಸದೃಢ ಪ್ಯಾಕ್ಸ್ ಗಳಲ್ಲಿ Retail Outlet ಗಳನ್ನು ತೆರೆಯಲು ಮಾರಾಟ ಸೌಕರ್ಯಕ್ಕಾಗಿ ಮೊದಲ ಹಂತದಲ್ಲಿ ಪ್ರತಿ ಪ್ಯಾಕ್ಸ್ ಗೆ ರೂ.10 ಲಕ್ಷದಂತೆ 100 ಪ್ಯಾಕ್ಸ್ ಗಳಿಗೆ ಸಹಾಯಧನ ನೀಡಲಾಗುವುದು. |
| 9 | ಸಾರ್ವಜನಿಕ ಪಡಿತರ ವಿತರಣೆಯನ್ನು (PDS) ಪ್ಯಾಕ್ಸ್ ಗಳಿಗೆ ಪ್ರಥಮ ಆದ್ಯತೆ ನೀಡುವುದರ ಮೂಲಕ ರಾಜ್ಯಾದ್ಯಾಂತ ಅನುಷ್ಠಾನಗೊಳಿಸುವಂತೆ ಕ್ರಮವಿಡಲಾಗುವುದು. |
| 10 | ಕಲಬುರಗಿ ನಗರದಲ್ಲಿ ಸಹಕಾರ ಇಲಾಖೆಯ ಪ್ರಾಂತೀಯ ಜಂಟಿ ನಿಬಂಧಕರು, ಜಿಲ್ಲಾ ಉಪ ನಿಬಂಧಕರು ಹಾಗೂ ಉಪ-ವಿಭಾಗೀಯ ಸಹಾಯಕ ನಿಬಂಧಕರು ಕಛೇರಿಗಳಿಗೆ ಹೊಸ ಕಛೇರಿ ಕಟ್ಟಡ ನಿರ್ಮಾಣ ಮಾಡಲು ಕ್ರಮಕೈಗೊಳ್ಳಲಾಗುವುದು. |
| 11 | ರಾಜ್ಯದ ಎಲ್ಲಾ ನೊಂದಾಯಿತ ಗೃಹ ನಿರ್ಮಾಣ ಸಹಕಾರ ಸಂಘಗಳ ಮಾಹಿತಿಯನ್ನು ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ವತಿಯಿಂದ ಆನ್‌ಲೈನ್‌ನಲ್ಲಿ ಅಳವಡಿಸಲಾಗುವುದು. |

| | |
|---|---|
| 12 | ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಅವ್ಯವಹಾರವನ್ನು ತಡೆಯಲು ಸಂಘಗಳನ್ನು ಬಲವರ್ಧನೆಗೊಳಿಸಲು ಸರ್ಕಾರವು ಸಹಾಯವಾಣಿಯನ್ನು ತೆರೆಯಲು ಉದ್ದೇಶಿಸಿದೆ. |
| 13 | ಸಹಕಾರ ಇಲಾಖೆಯ ನಿಬಂಧಕರ ಕಛೇರಿ ಇಲಾಖೆಗೆ ಅವಶ್ಯವಿರುವ ಸಿಬ್ಬಂದಿಗಳ ನೇಮಕಾತಿಯನ್ನು ಶೀಘ್ರಗತಿಯಲ್ಲಿ ಕೈಗೊಳ್ಳಲು ಕ್ರಮವಿಡಲಾಗುವುದು. |
| 14 | ಸಹಕಾರ ಇಲಾಖೆಯ ಸಹಾಯಕ ನಿಬಂಧಕರುಗಳು ಸುಗಮವಾಗಿ ಕಛೇರಿ ಕಾರ್ಯನಿರ್ವಹಿಸಲು ಅವಶ್ಯಕವಿರುವ 52 ವಾಹನಗಳನ್ನು ಖರೀದಿಸಲು ಹಾಗೂ ಸದರಿ ಹೊಸ ವಾಹನಗಳಿಗೆ ವಾಹನ ಚಾಲಕರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಕ್ರಮವಿಡಲಾಗುವುದು. |

ಸಹಕಾರ ಸಂಘಗಳ ಜಂಟಿ ನಿಬಂಧಕರು,
(ಆಡಳಿತ ಮತ್ತು ಅಭಿವೃದ್ಧಿ).